# ಅಧ್ಯಾಯ–III

# ರಾಜ್ಯ ಅಬಕಾರಿ

## 3.1 ತೆರಿಗೆ ನಿರ್ವಹಣೆ

ರಾಜ್ಯ ಸರ್ಕಾರವು, ಒಂದು ಅಧಿಸೂಚನೆಯ ಮೂಲಕ ಅಬಕಾರಿ ಸುಂಕವನ್ನು ವಿಧಿಸಬಹುದಾದಂತಹ ಪದಾರ್ಥ ಎಂಬುದಾಗಿ ಘೋಷಿಸಬಹುದಾದಂತಹ ಯಾವುದೇ ಮದ್ಯಪಾನ, ಮತ್ತನ್ನು ಬರಿಸುವ ಔಷಧಗಳು, ಅಫೀಮು, ಅಥವಾ ಇನ್ನಿತರೆ ಸಂವೇದನಾಹಾರಿಗಳು ಹಾಗೂ ಸಂವೇದನಾಹಾರಿಯಲ್ಲದ ಔಷಧಗಳ ಮೇಲೆ ರಾಜ್ಯ ಅಬಕಾರಿ ಸುಂಕವನ್ನು ವಿಧಿಸಲಾಗುವುದು. ಕರ್ನಾಟಕ ಅಬಕಾರಿ ಅಧಿನಿಯಮ, 1965 ಹಾಗೂ ಅದರ ಅಡಿಯಲ್ಲಿ ರೂಪಿಸಲ್ಪಟ್ಟಂತಹ ನಿಯಮಗಳು ಮದ್ಯಪಾನ ಹಾಗೂ ಮತ್ತನ್ನು ಬರಿಸುವ ಔಷದಗಳ ಉತ್ಪಾದನೆ, ತಯಾರಿಕೆ, ಹೊಂದಿರುವಿಕೆ, ಆಮದು, ರಫ್ತು, ಸಾಗಾಣಿಕೆ, ಖರೀದಿ ಮತ್ತು ಮಾರಾಟಗಳಿಗೆ ಸಂಬಂಧಿತ ನಿಯಮಗಳನ್ನು ನಿಯಂತ್ರಿಸುತ್ತವೆ. ರಾಜ್ಯ ಅಬಕಾರಿ ಇಲಾಖೆಯು ಹಣಕಾಸು ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಹಾಗೂ ಅಬಕಾರಿ ಜಂಟಿ ಆಯುಕ್ತರುಗಳ ಸಹಾಯದಿಂದ ಕಾರ್ಯನಿರ್ವಹಿಸುವಂತಹ ಅಬಕಾರಿ ಆಯುಕ್ತರವರ ನೇತೃತ್ವದಲ್ಲಿದೆ. ಅಬಕಾರಿ ಸುಂಕವು ಜಿಲ್ಲಾ ಮಟ್ಟದಲ್ಲಿ ಅಬಕಾರಿ ಉಪ ಆಯುಕ್ತರುಗಳಿಂದ ಹಾಗೂ ಬಟ್ಟಿಗೃಹಗಳು (ಡಿಸ್ಟಿಲರೀಸ್) ಮತ್ತು ರೇಂಜ್ ಕಚೇರಿಗಳು ಅಬಕಾರಿ ಮೇಲ್ವಿಚಾರಕರುಗಳು/ಅಧೀಕ್ಷಕರುಗಳು, (ಸೂಪರಿಂಟೆಂಡೆಂಟ್ಸ್) ಅಬಕಾರಿ ಉಪ–ಮೇಲ್ವಿಚಾರಕರುಗಳು/ಉಪ–ಅಧೀಕ್ಷಕರುಗಳು, ಅಬಕಾರಿ ತನಿಖಾಧಿಕಾರಿಗಳಿಂದ (ಇನ್ಸ್‌ಪೆಕ್ಟರ್ಸ್) ನಿಯಂತ್ರಿಸಲ್ಪಡುತ್ತದೆ

## 3.2 ಆಂತರಿಕ ಲೆಕ್ಕಪರಿಶೋಧನೆ

ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಇಲಾಖೆಯಲ್ಲಿ 1990ರಿಂದ ಕಾರ್ಯನಿರ್ವಹಿಸುತ್ತಿದೆ. ಅದು, ಪ್ರಧಾನ ಮಹಾಲೇಖಾಪಾಲರು (ಲೆಕ್ಕಪತ್ರಗಳು ಮತ್ತು ಹಕ್ಕುಗಳು), ಇವರ ಕಚೇರಿಯಿಂದ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಓರ್ವ ಲೆಕ್ಕಾಧಿಕಾರಿಯವರ ನೇತೃತ್ವದಲ್ಲಿ ಹಾಗೂ ಆಯುಕ್ತರವರ ಒಟ್ಟಾರೆ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇಲಾಖೆಯು ಒದಗಿಸಿದ ಮಾಹಿತಿಯಂತೆ, 2014–15ರಲ್ಲಿ ಲೆಕ್ಕಪರಿಶೋಧನೆ ಕೈಗೊಳ್ಳಲು ಅರ್ಹವಾಗಿದ್ದಂತಹ 109 ಕಚೇರಿಗಳ ಪೈಕಿ, ಕೇವಲ ಐದನ್ನು (ಶೇಕಡಾ 5.59) ಮಾತ್ರ ಲೆಕ್ಕಪರಿಶೋಧನೆಗೆ ಒಳಪಡಿಸಲಾಗಿದ್ದಿತು. ಕಚೇರಿಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವಲ್ಲಿನ ಕೊರತೆಗೆ ಆ ವಿಭಾಗದಲ್ಲಿನ ಸಿಬ್ಬಂದಿಗಳ ಕೊರತೆಯ ಕಾರಣವನ್ನು ನೀಡಲಾಗಿದ್ದಿತು. ಇಲಾಖೆಯು ಒದಗಿಸಿದ ಮಾಹಿತಿಯಂತೆ, ಗಮನಿಸಲಾಗಿದ್ದಂತಹ ಲೆಕ್ಕಪರಿಶೋಧನಾ ಅಂಶಗಳು/ಕಂಡಿಕೆಗಳು, ಇತ್ಯರ್ಥಗೊಂಡವುಗಳು ಹಾಗೂ ತೆರಿಗೆ ಮೊತ್ತದ ಪರಿಣಾಮವನ್ನು ಹೊಂದಿರುವುದರ ಜೊತೆಗೆ ಬಾಕಿ ಇರುವ ಅಂಶಗಳು/ಕಂಡಿಕೆಗಳ ಸಂಖ್ಯೆಗಳ ವರ್ಷವಾರು ವಿವರಗಳು ಈ ಕೆಳಗಿನಂತಿವೆ:

**ಕೋಷ್ಟಕ 3.1**

**ಆಂತರಿಕ ಲೆಕ್ಕಪರಿಶೋಧನಾ ವಿಭಾಗವು ಗಮನಿಸಲಾಗಿದ್ದಂತಹ ಲೆಕ್ಕಪರಿಶೋಧನಾ ಅಂಶಗಳು/ಕಂಡಿಕೆಗಳ ವರ್ಷವಾರು ವಿವರಗಳು**

**(₹ ಲಕ್ಷದಲ್ಲಿ)**

| ವರ್ಷ | ಲೆಕ್ಕಪರಿಶೋಧನಾ ಅಂಶಗಳು/ಕಂಡಿಕೆಗಳು | | ಇತ್ಯರ್ಥಗೊಂಡಂತಹ ಲೆಕ್ಕಪರಿಶೋಧನಾ ಅಂಶಗಳು | | ಬಾಕಿಯಿರುವ ಲೆಕ್ಕಪರಿಶೋಧನಾ ಅಂಶಗಳು/ಕಂಡಿಕೆಗಳು | |
|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2010-11 ವರೆಗೆ | 424 | 508.44 | 22 | 6.47 | 402 | 501.97 |
| 2011-12 | 37 | 39.52 | 16 | 31.09 | 21 | 8.43 |
| 2012-13 | 75 | 1153.05 | 5 | 6.59 | 70 | 1146.46 |
| 2013-14 | 0 | 0 | 0 | 0 | 0 | 0 |
| 2014-15 | 6 | 2.87 | 0 | 0 | 6 | 2.87 |
| **ಒಟ್ಟು** | **544** | **1706.88** | **47** | **49.15** | **505** | **1666.73** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಕಂಡಿಕೆಗಳ ಸಂಖ್ಯೆ ಹಾಗೂ ಮೊತ್ತವು ತಾಳೆಯಾಗುವುದಿಲ್ಲ. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ, ₹ 1706.88 ಲಕ್ಷ ಮೊತ್ತವು ಒಳಗೊಂಡಂತೆ ಬಾಕಿ ಇದ್ದಂತಹ 544 ಆಕ್ಷೇಪಣೆಗಳ ಪೈಕಿ, ₹ 49.15 ಲಕ್ಷ (ಶೇಕಡಾ 2.88) ಮೊತ್ತವು ಒಳಗೊಂಡಂತೆ ಕೇವಲ 47 ಆಕ್ಷೇಪಣೆಗಳನ್ನು (ಶೇಕಡಾ 8.6) ಇತ್ಯರ್ಥಗೊಳಿಸಲಾಗಿದ್ದಿತು. ಅಂಕಿಸಂಖ್ಯೆಗಳಲ್ಲಿನ ಅಸಾಮಂಜ್ಯಸ್ಯತೆಗಳು, ಕಚೇರಿಗಳ ಅಲ್ಪಸಂಖ್ಯೆಯ ವ್ಯಾಪ್ತಿ ಹಾಗೂ ಬಾಕಿ ಇರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳ ಬೃಹತ್

ಪ್ರಮಾಣದ ಬಾಕಿಗಳು ಇಲಾಖೆಯು ಆಂತರಿಕ ಲೆಕ್ಕಪರಿಶೋಧನೆಗೆ ಅರ್ಹ ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

ಅನ್ವಯಗೊಳ್ಳುವ ನಿಯಮಗಳು, ನಿಯಂತ್ರಣಗಳು ಹಾಗೂ ಅನುಮೋದಿತ ಕಾರ್ಯವಿಧಾನಗಳನ್ನು ಇಲಾಖೆಯು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಆಂತರಿಕ ಲೆಕ್ಕಪರಿಶೋಧನೆಯು ಒಂದು ಪ್ರಮುಖ ವ್ಯವಸ್ಥೆಯಾಗಿರುವುದರಿಂದ, ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಲು ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.

## 3.3 ಲೆಕ್ಕಪರಿಶೋಧನೆಯ ಫಲಿತಾಂಶಗಳು

ರಾಜ್ಯ ಅಬಕಾರಿ ಇಲಾಖೆಯ 30 ಕಚೇರಿಗಳ ದಾಖಲೆಗಳನ್ನು 2014–15ರಲ್ಲಿ ಮಾಡಲಾದ ಪರೀಕ್ಷಾ–ಪರಿಶೀಲನೆಯು 57 ಪ್ರಕರಣಗಳಲ್ಲಿ ₹ 11.96 ಕೋಟಿ ಮೊತ್ತವು ಒಳಗೊಂಡಂತೆ ಪರವಾನಿಗೆ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿವಿಧಿಸಿದ್ದುದು, ವರ್ಗಾವಣೆ ಶುಲ್ಕವನ್ನು ವಿಧಿಸದಿದ್ದುದು, ಭಾರತೀಯ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಎತ್ತುವಳಿ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು ಹಾಗೂ ಇನ್ನಿತರೆ ನಿಯಮಬಾಹಿರತೆಗಳನ್ನು ತೋರಿಸಿಕೊಟ್ಟಿತು:

**ಕೋಷ್ಟಕ 3.2**
**ಲೆಕ್ಕಪರಿಶೋಧನೆಯ ಫಲಿತಾಂಶಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ. | ಪ್ರವರ್ಗ | ಪ್ರಕರಣಗಳ ಸಂಖ್ಯೆ | ಮೊತ್ತ |
|---|---|---|---|
| 1. | ಭಾರತೀಯ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಎತ್ತುವಳಿ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸದಿದ್ದುದು | 12 | 7.76 |
| 2. | ವರ್ಗಾವಣೆ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 17 | 2.60 |
| 3. | ಪರವಾನಿಗೆ ಶುಲ್ಕವನ್ನು ವಿಧಿಸದಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು | 6 | 0.72 |
| 4. | ಇತರೆ ನಿಯಮಬಾಹಿರತೆಗಳು | 22 | 0.88 |
| | **ಒಟ್ಟು** | **57** | **11.96** |

2014–15 ಸಾಲಿನಲ್ಲಿ ಇಲಾಖೆಯು 18 ಕಂಡಿಕೆಗಳಲ್ಲಿ ₹ 3.55 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ಮಾಡಲಾಗಿದ್ದಂತಹ ನಿರ್ಧಾರಣೆಗಳನ್ನು ಒಪ್ಪಿಕೊಂಡಿತು ಹಾಗೂ ಈ ಹಿಂದಿನ ಸಾಲುಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ 57 ಕಂಡಿಕೆಗಳಲ್ಲಿ ₹ 7.40 ಕೋಟಿ ಮೊತ್ತವನ್ನು ವಸೂಲಾತಿ ಮಾಡಿತು.

₹ 10.57 ಕೋಟಿ ಮೊತ್ತವು ಒಳಗೊಂಡಂತೆ ಕೆಲವು ದೃಷ್ಟಾಂತ ಪ್ರಕರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ತಿಳಿಸಲಾಗಿದೆ.

## 3.4 ಭಾರತೀಯ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಎತ್ತುವಳಿ ಮಾಡಿದ್ದುದು

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 14(2)ರ[1] ಅನುಸಾರ, ಸಿಎಲ್–2 ನಮೂನೆಯಲ್ಲಿ ಚಿಲ್ಲರೆ ಮಾರಾಟ ಮಳಿಗೆ ಪರವಾನಿಗೆಗಳನ್ನು ಹಾಗೂ ಸಿಎಲ್–9 ನಮೂನೆಯಲ್ಲಿ ಬಾರು ಪರವಾನಿಗೆಗಳನ್ನು ಹೊಂದಿರುವ ಪರವಾನಿಗೆದಾರರುಗಳು, ತಾವು ಮಾರಾಟ ಮಾಡುವ ಸಲುವಾಗಿ, ಓರ್ವ ವಿತರಣಾ ಪರವಾನಿಗೆದಾರರಿಂದ ಮಳಿಗೆ ಒಂದಕ್ಕೆ ತಿಂಗಳು ಒಂದಕ್ಕೆ ನಿಗದಿಪಡಿಸಲಾಗಿರುವ ಮದ್ಯದ ಕನಿಷ್ಠ ಪರಿಮಾಣವನ್ನು ಮಾಡತಕ್ಕದ್ದು. ಪರವಾನಿಗೆದಾರರುಗಳು ಕಳ್ಳಭಟ್ಟಿ/ಕಾನೂನುಬಾಹಿರ ಮದ್ಯವನ್ನು ಪಡೆದುಕೊಳ್ಳದಿರುವುದನ್ನು ಹಾಗೂ ಅದನ್ನು ತಮ್ಮ ಮಳಿಗೆಗಳಲ್ಲಿ ಮಾರಾಟ ಮಾಡದಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಮಾರಾಟ ಮಾಡಲು ಪ್ರಯತ್ನಗಳನ್ನು ಮಾಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಹಾಗೂ ಅದರಿಂದಾಗಿ ಆರೋಗ್ಯಕರ ಮದ್ಯವನ್ನು ಅಧಿಕೃತ ಮೂಲಗಳಿಂದ ಪಡೆದುಕೊಂಡಿರುವುದನ್ನು ಮತ್ತು ಅದನ್ನು ಮಾತ್ರ ಗ್ರಾಹಕರಿಗೆ ಮಾರಾಟ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಕನಿಷ್ಠ ಮಿತಿಯು ಪ್ರತಿಯೊಂದು ಮಾದರಿಯ ಪರವಾನಿಗೆಗೆ ನಿರ್ದಿಷ್ಟಪಡಿಸಲಾಗಿರುವ ಪರವಾನಿಗೆ ಶುಲ್ಕ, ಸಾಮಾನ್ಯ ನಿರ್ವಹಣಾ ವೆಚ್ಚಗಳು, ಭರಿಸಲಾದಂತಹ ಇತರೆ ವೆಚ್ಚಗಳು, ಮಳಿಗೆಯು ಇರುವ ಸ್ಥಳ, ಕಾರ್ಯಾಚರಣೆಯ ಪ್ರದೇಶ, ಹಿಂದಿನ ಸಾಲುಗಳಲ್ಲಿ ಮದ್ಯದ ಮಾರಾಟ ಹಾಗೂ ಸದೃಶ ಅಂಶಗಳ ಮೇಲೆ ಆಧಾರಿತವಾಗಿರುತ್ತದೆ. ತಿಂಗಳಿಗೆ ನಿಗದಿಗೊಳಿಸಲಾಗಿರುವ ಮದ್ಯದ ಕನಿಷ್ಠ ಪರಿಮಾಣವನ್ನು ಎತ್ತುವಳಿ ಮಾಡುವಲ್ಲಿ ಪರವಾನಿಗೆದಾರರು

[1] 1 ಆಗಸ್ಟ್ 2014ರಿಂದ ಜಾರಿಗೆ ಬರುವಂತೆ ನಿಯಮದ ತಿದ್ದುಪಡಿಯ ಮೂಲಕ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 14(2)ನ್ನು ತೆಗೆದುಹಾಕಲಾಯಿತು.

ವಿಫಲಗೊಂಡಲ್ಲಿ, ಅವರು ಕಡಿಮೆ ಪ್ರಮಾಣದಲ್ಲಿ ಮಾಡಲಾದ ಎತ್ತುವಳಿಗೆ ಪ್ರತಿಯೊಂದು ಬಲ್ಕು ಲೀಟರಿಗೆ ₹ 100ರಂತೆ ಪಾವತಿಸಲು ಬಾಧ್ಯರಾಗಿರುತ್ತಾರೆ.

ನಿಯಮಾನುಸಾರ ನಿಗದಿಗೊಳಿಸಲಾಗಿರುವ ಕನಿಷ್ಠ ಪರಿಮಾಣಕ್ಕೆ ಪ್ರತಿಯಾಗಿ ಪ್ರತಿಯೋರ್ವ ಪರವಾನಿಗೆದಾರರ ಭಾರತೀಯ ಮದ್ಯದ ವಾಸ್ತವಿಕ ಮಾಸಿಕ ಸಾಗಣೆಯನ್ನು ಗಮನಿಸುವುದಕ್ಕಾಗಿ ರೇಂಜ್ ಕಚೇರಿಯು ಒಂದು 'ಬಳಕೆ ವಹಿ'ಯನ್ನು ನಿರ್ವಹಿಸುತ್ತದೆ. ಒಂದು ಕಾಲಮಿತಿಯೊಳಗೆ ಕಡಿಮೆ ಪ್ರಮಾಣದ ಎತ್ತುವಳಿಯನ್ನು ಗುರುತಿಸುವ ಹಾಗೂ ಅದನ್ನು ಸರಿದೂಗಿಸುವ ಸಲುವಾಗಿ ಸಂಬಂಧಿತ ಅಧಿಕಾರಿಗಳು ಅದನ್ನು ನಿಯತಕಾಲಿಕವಾಗಿ ಸಮೀಕ್ಷಿಸಿರಲಿಲ್ಲ ಎಂಬುದನ್ನು ಗಮನಿಸಲಾಯಿತು.

ಬೆಂಗಳೂರು (ಉತ್ತರ), ಬೆಂಗಳೂರು (ದಕ್ಷಿಣ), ಬೆಂಗಳೂರು (ಪೂರ್ವ), ಬೆಳಗಾವಿ ಹಾಗೂ ಬಳ್ಳಾರಿಯ ಅಬಕಾರಿ ಉಪ-ಆಯುಕ್ತರುಗಳ ಅಡಿಯಲ್ಲಿನ 11[2] ಅಬಕಾರಿ ತನಿಖಾಧಿಕಾರಿಗಳು ನಿರ್ವಹಿಸಿದ್ದಂತಹ ಬಳಕೆ ವಹಿಗಳನ್ನು ಜುಲೈ 2014 ಹಾಗೂ ಡಿಸೆಂಬರ್ 2014ರ ನಡುವೆ ಮಾಡಲಾದ ಪರೀಕ್ಷಾ-ಪರಿಶೀಲನೆಯು 113 ಪರವಾನಿಗೆದಾರರುಗಳು (109 ಸಿಎಲ್-9 ಹಾಗೂ ನಾಲ್ಕು ಸಿಎಲ್-2) 2009-10ರಿಂದ 2013-14ರ ಅವಧಿಯಲ್ಲಿ 7,47,957 ಬಲ್ಕು ಲೀಟರುಗಳಷ್ಟು ಭಾರತೀಯ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಎತ್ತುವಳಿ ಮಾಡಿದ್ದರು ಎಂಬುದನ್ನು ತೋರಿಸಿಕೊಟ್ಟಿತು. ಈ ಪರವಾನಿಗೆದಾರರುಗಳು ಭಾರತೀಯ ಮದ್ಯದ ಎತ್ತುವಳಿಗಾಗಿ ನಿರ್ದಿಷ್ಟಪಡಿಸಲಾಗಿದ್ದ ಕನಿಷ್ಠ ಮಿತಿಯನ್ನು ಉಲ್ಲಂಘಿಸಿದ್ದರಾದರೂ, ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತೆ ಭಾರತೀಯ ಮದ್ಯವನ್ನು ಕಡಿಮೆ ಪ್ರಮಾಣದಲ್ಲಿ ಎತ್ತುವಳಿ ಮಾಡಿದ್ದಕ್ಕಾಗಿ ದಂಡವನ್ನು ವಿಧಿಸಲು ಇಲಾಖೆಯು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ದಂಡವನ್ನು ವಿಧಿಸದಿದ್ದುದು ₹ 7.47 ಕೋಟಿ ಮೊತ್ತದಷ್ಟು ಆಗಿದ್ದಿತು.

ಈ ಪ್ರಕರಣಗಳನ್ನು ಮಾರ್ಚ್ 2015ರಲ್ಲಿ ಇಲಾಖೆಯ ಗಮನಕ್ಕೆ ತಂದನಂತರ ಹಾಗೂ ಸರ್ಕಾರದ ಗಮನಕ್ಕೆ ಮೇ 2015ರಲ್ಲಿ ತಿಳಿಸಿದನಂತರ ಆರು ಪರವಾನಿಗೆದಾರರುಗಳಿಂದ ₹ 18.12 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಯಿತು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ನೋಟೀಸುಗಳನ್ನು ನೀಡಲಾಗಿದೆ ಹಾಗೂ ವಸೂಲಾತಿಗಳು ಪ್ರಗತಿಯಲ್ಲಿವೆ ಎಂಬುದಾಗಿ ಇಲಾಖೆಯು ತಿಳಿಸಿತು (ನವಂಬರ್ 2015).

## 3.5 ಪರಿಷ್ಕರಣಾ ಪೂರ್ವ ದರಗಳನ್ನು ಅನ್ವಯಿಸಿದ ಕಾರಣ ಪರವಾನಗಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು

ಕರ್ನಾಟಕ ಅಬಕಾರಿ ಪರವಾನಿಗೆಗಳ (ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 17-ಬಿ(1)ರ ಅನುಸಾರ, ಉಪ-ಆಯುಕ್ತರವರು, ಪರವಾನಿಗೆದಾರರು ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಹಾಗೂ ವಾರ್ಷಿಕ ಪರವಾನಿಗೆ ಶುಲ್ಕಕ್ಕೆ ಸಮನಾದಂತಹ ವರ್ಗಾವಣೆ ಶುಲ್ಕ ಪಾವತಿಯ ಷರತ್ತಿಗೆ ಒಳಪಟ್ಟಂತೆ ಹಾಗೂ ಅಬಕಾರಿ ಆಯುಕ್ತರವರ ಪೂರ್ವಾನುಮತಿಯೊಂದಿಗೆ ಅಂತಹ ಪರವಾನಿಗೆದಾರರು ಹೆಸರಿಸಿರುವ ಯಾವುದೇ ವ್ಯಕ್ತಿಯ ಹೆಸರಿಗೆ ಪರವಾನಿಗೆಯನ್ನು ವರ್ಗಾಯಿಸಬಹುದು. ಅಧಿಸೂಚನೆ ಸಂಖ್ಯೆ ಎಫ್‌ಡಿ 05 ಪಿಇಎಸ್ 2013 ದಿನಾಂಕ 28-02-2013ರ ಅನುಸಾರ, ವಿಧಿಸಬೇಕಾದ ವರ್ಗಾವಣೆ ಶುಲ್ಕವನ್ನು ವಾರ್ಷಿಕ ಪರವಾನಿಗೆ ಶುಲ್ಕದ ಎರಡರಷ್ಟಕ್ಕೆ ಸಮನಾದ ಒಂದು ಮೊತ್ತಕ್ಕೆ ಪರಿಷ್ಕರಿಸಲಾಗಿದ್ದಿತು ಹಾಗೂ ಅದು 01 ಮಾರ್ಚ್ 2013ರಿಂದ ಜಾರಿಗೆ ಬಂದಿದ್ದಿತು.

ಅಬಕಾರಿ ಇಲಾಖೆಯ 11 ಉಪ-ಆಯುಕ್ತರುಗಳ[3] ದಾಖಲೆಗಳನ್ನು ಸೆಪ್ಟಂಬರ್ 2014 ಮತ್ತು ಮಾರ್ಚ್ 2015ರ ನಡುವೆ ಪರೀಕ್ಷಾ-ಪರಿಶೀಲನೆ ಮಾಡುವ ವೇಳೆಯಲ್ಲಿ, ಪರವಾನಿಗೆಗಳ ವರ್ಗಾವಣೆಯ 51 ಪ್ರಕರಣಗಳಲ್ಲಿ, ವಿಧಿಸಲಾಗಿದ್ದಂತಹ ಶುಲ್ಕವು, ಈ ವರ್ಗಾವಣೆಗಳನ್ನು 01 ಮಾರ್ಚ್ 2013ರಂದು ಅಥವಾ ತದನಂತರದ ದಿನಾಂಕಗಳಲ್ಲಿ ಮಾಡಲಾಗಿದ್ದಿತಾದರೂ, ಅನ್ವಯಿಸಲಾಗಿದ್ದ ದರವು ಪರಿಷ್ಕರಣಾ ಪೂರ್ವದ ದರಗಳದ್ದಾಗಿದ್ದಿತು (ವಾರ್ಷಿಕ ಪರವಾನಿಗೆ ಶುಲ್ಕಕ್ಕೆ ಸಮನಾದ) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪರವಾನಿಗೆಗಳ ವರ್ಗಾವಣೆಗೆ ಪರಿಷ್ಕರಣಾ ದರದಲ್ಲಿ ವಿಧಿಸಬೇಕಿದ್ದಂತಹ ಶುಲ್ಕವು ₹ 4.96 ಕೋಟಿ ಆಗಿದ್ದಿತಾದಲ್ಲಿ ಪರಿಷ್ಕರಣಾ ಪೂರ್ವ ದರಗಳನ್ನು ಅನ್ವಯಿಸಿದ್ದ ಕಾರಣ ವಿಧಿಸಲಾಗಿದ್ದಂತಹ ಶುಲ್ಕವು ಕೇವಲ ₹ 2.85 ಕೋಟಿ ಆಗಿದ್ದಿತು. ತತ್ಪರಿಣಾಮವಾಗಿ ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಂತಹ ಶುಲ್ಕವು ₹ 2.11 ಕೋಟಿ ಆಗಿದ್ದಿತು.

ಲೆಕ್ಕಪರಿಶೋಧನೆಯು ಈ ಪ್ರಕರಣಗಳನ್ನು ಜನವರಿ 2015 ಹಾಗೂ ಏಪ್ರಿಲ್ 2015ರ ನಡುವೆ ಅಬಕಾರಿ ಆಯುಕ್ತರವರ ಗಮನಕ್ಕೆ ತಂದಿದ್ದಿತು ಹಾಗೂ ಜೂನ್ 2015ರಲ್ಲಿ ಸರ್ಕಾರಕ್ಕೆ ತಿಳಿಸಿದ್ದಿತು. ಇಬ್ಬರು

[2] ರಾಜಾಜಿನಗರ, ಶ್ರೀರಾಮಪುರ, ಜಯನಗರ, ಬಸವನಗುಡಿ, ವಿವೇಕನಗರ, ಅಶೋಕನಗರ, ಹಲಸೂರು, ಫ್ರೇಜರ್ ಟೌನ್, ಶಿವಾಜಿನಗರ, ಬೆಳಗಾವಿ ದಕ್ಷಿಣ ಮತ್ತು ಹೊಸಪೇಟೆ.

[3] ಮಂಗಳೂರು, ಮಡಿಕೇರಿ, ಕಲಬುರ್ಗಿ, ಧಾರವಾಡ, ಬಾಗಲಕೋಟೆ, ಬಳ್ಳಾರಿ, ಬೆಂಗಳೂರು (ಪೂರ್ವ), ಬೆಂಗಳೂರು (ಉತ್ತರ), ಬೆಂಗಳೂರು (ಪಶ್ಚಿಮ), ಬೆಂಗಳೂರು (ದಕ್ಷಿಣ) ಹಾಗೂ ಹಾಸನ.

ಪರವಾನಿಗೆದಾರರುಗಳಿಂದ ₹6.42 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಗಿದ್ದಿತು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ, ನೋಟೀಸುಗಳನ್ನು ನೀಡಲಾಗಿದೆ ಎಂಬುದಾಗಿ ಇಲಾಖೆಯು ತಿಳಿಸಿತು (ನವಂಬರ್ 2015).

## 3.6 ಪರವಾನಿಗೆಯನ್ನು ತಪ್ಪಾಗಿ ವರ್ಗೀಕರಿಸಿದ ಕಾರಣ ಪರವಾನಿಗೆ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು.

ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 3 (6–ಎ) ಅನುಸಾರ, ಮದ್ಯವನ್ನು ಹೊಂದಿರುವುದಕ್ಕಾಗಿ ಹಾಗೂ ಮಾರಾಟ ಮಾಡುವುದಕ್ಕಾಗಿ ಸ್ಟಾರ್ ಹೋಟೆಲುಗಳಿಗೆ ನಮೂನೆ 'ಸಿಎಲ್–6ಎ'ನಲ್ಲಿ ಅಬಕಾರಿ ಇಲಾಖೆಯ ಉಪ–ಆಯುಕ್ತರು ಒಂದು ಪರವಾನಿಗೆಯನ್ನು ನೀಡುವರು. ಈ ನಿಯಮದ ಅಡಿಯಲ್ಲಿನ ವಿವರಣೆಯ ಪ್ರಕಾರ 'ಸ್ಟಾರ್ ಹೋಟೆಲು' ಎಂದರೆ "ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯವು ಆ ರೀತಿ ಮನ್ನಣೆ ನೀಡಿರುವ ಹೋಟೆಲು ಆಗಿರುತ್ತದೆ. ಸಿಎಲ್–7ರಲ್ಲಿನ ಪರವಾನಿಗೆಯು ಮತ್ತೊಂದೆಡೆ, 'ಹೋಟೆಲುಗಳು ಹಾಗೂ ಊಟದ ಮನೆಗಳಿಗೆ' ಅನ್ವಯಿಸುತ್ತದೆ.

ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯದ ಪ್ರಕಾರ, ಮೂರು ಜಿಲ್ಲೆಗಳಲ್ಲಿನ[4] ನಾಲ್ಕು ಹೋಟೆಲುಗಳಿಗೆ ಸ್ಟಾರ್ ಹೋಟೆಲು ಪ್ರವರ್ಗದ ಅಡಿಯಲ್ಲಿ, ಈ ಕೆಳಗಿನ ಕೋಷ್ಟಕದಲ್ಲಿ ಪ್ರತಿಯೊಂದು ಹೋಟೆಲಿನ ಪ್ರತಿಯಾಗಿ ತಿಳಿಸಲಾಗಿರುವ ವಿವಿಧ ದಿನಾಂಕಗಳಿಂದ ವರ್ಗೀಕರಣವನ್ನು ನೀಡಲಾಗಿದ್ದಿತು. ಮೂರು ಜಿಲ್ಲೆಗಳಲ್ಲಿನ ಅಬಕಾರಿ ಇಲಾಖೆಯ ಉಪ–ಆಯುಕ್ತರುಗಳ ದಾಖಲೆಗಳನ್ನು ಆಗಸ್ಟ್ 2014 ಮತ್ತು ಜನವರಿ 2015ರ ನಡುವೆ ಮಾಡಲಾದ ಒಂದು ಪರೀಕ್ಷಾ–ಪರಿಶೀಲನೆಯು, ಈ ಹೋಟೆಲುಗಳು ನಮೂನೆ 'ಸಿಎಲ್–6ಎ'ನಲ್ಲಿ ಸೂಕ್ತ ಪರವಾನಿಗೆಗಳನ್ನು ಪಡೆದುಕೊಳ್ಳುವ ಬದಲಾಗಿ 'ಹೋಟೆಲುಗಳು ಮತ್ತು ಊಟದ ಮನೆಗಳಿಗೆ' ಅನ್ವಯಿಸುವಂತಹ ಪರವಾನಿಗೆಗಳನ್ನು ನಮೂನೆ ಸಿಎಲ್–7ರಲ್ಲಿ ಪಡೆದುಕೊಂಡಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಇಲಾಖೆಯು ಪರವಾನಿಗೆಗಳನ್ನು ನವೀಕರಿಸುವ ವೇಳೆಯಲ್ಲಿ ಹೋಟೆಲುಗಳ ಸ್ಥಾನಮಾನವನ್ನು ಖಚಿತಪಡಿಸಿಕೊಳ್ಳಲಿಲ್ಲ. ಈ ರೀತಿಯಾಗಿ, ಪರವಾನಿಗೆಗಳನ್ನು ತಪ್ಪಾಗಿ ವರ್ಗೀಕರಿಸಿದ್ದು ಈ ಕೆಳಗೆ ವಿವರಿಸಿರುವಂತೆ ₹ 78.74 ಲಕ್ಷ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

**ಕೋಷ್ಟಕ 3.3**

**ಪರವಾನಿಗೆಯನ್ನು ತಪ್ಪಾಗಿ ವರ್ಗೀಕರಿಸಿದ ಕಾರಣ ಪರವಾನಿಗೆ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು.**

**(₹ಲಕ್ಷದಲ್ಲಿ)**

| ಹೋಟೆಲಿನ ಹೆಸರು/ 3 ಸ್ಟಾರ್ ಪ್ರವರ್ಗವು ಜಾರಿಗೆ ಬಂದ ದಿನಾಂಕ | ವರ್ಷ | ಪರವಾನಿಗೆ ಶುಲ್ಕ ಮತ್ತು ಹೆಚ್ಚುವರಿ ಪರವಾನಿಗೆ ಶುಲ್ಕ | | |
|---|---|---|---|---|
| | | ಸಿಎಲ್–6ಎ ಅಡಿಯಲ್ಲಿ ವಿಧಿಸಬೇಕಾಗಿದ್ದುದು | ಸಿಎಲ್–7ರ ಅಡಿಯಲ್ಲಿ ವಿಧಿಸಿದ್ದು | ಕಡಿಮೆ ಪ್ರಮಾಣದಲ್ಲಿ ವಿದಿಸಿದ್ದು |
| ಹೋಟೆಲು ಇ.ಎ.ಸಿ. ಕುಬೇರ ಪ್ಯಾಲೇಸು, ರಾಯಚೂರು / 13-04-2012 | 2011-12 | 5.86[5] | 4.95 | 0.91 |
| | 2012-13 | 9.20 | 4.95 | 4.25 |
| | 2013-14 | 9.20 | 4.95 | 4.25 |
| | 2014-15 | 9.20 | 4.95 | 4.25 |
| ರಾಕ್ ಹೋಟೆಲು ಪ್ರೈ.ಲಿ., ಬಳ್ಳಾರಿ / 30-07-2012 | 2012-13 | 8.71[6] | 3.22 | 5.49 |
| | 2013-14 | 9.20 | 3.22 | 5.98 |
| | 2014-15 | 9.20 | 3.22 | 5.98 |
| ಸಿದ್ದಾರ್ಥ ರೆಸಾರ್ಟ್ಸ್ ಅಂಡ್ ಫುಡ್ಸ್ ಪ್ರೈ.ಲಿ, ಮಡಿಕೇರಿ / 11-06-2010 | 2010-11 | 9.20 | 3.22 | 5.98 |
| | 2011-12 | 9.20 | 3.22 | 5.98 |
| | 2012-13 | 9.20 | 3.22 | 5.98 |
| | 2013-14 | 9.20 | 3.22 | 5.98 |
| | 2014-15 | 9.20 | 3.22 | 5.98 |

[4] ರಾಯಚೂರು, ಬಳ್ಳಾರಿ ಮತ್ತು ಮಡಿಕೇರಿ

[5] 13 ಏಪ್ರಿಲ್ 2012ರವರೆಗೆ ಸಿಎಲ್–7ರ ಅಡಿಯಲ್ಲಿ ಪರವಾನಿಗೆ ಶುಲ್ಕವಾಗಿ ಪ್ರಮಾಣಾನುಗುಣವಾಗಿ ಲೆಕ್ಕ ಹಾಕಲಾಯಿತು ಹಾಗೂ ತದನಂತರ, ಸಿಎಲ್–6ಎ ಅಡಿಯಲ್ಲಿ ಪರವಾನಿಗೆ ಶುಲ್ಕವನ್ನು ಲೆಕ್ಕಹಾಕಲಾಯಿತು.

[6] 30 ಜುಲೈ 2012ರವರೆಗೆ ಸಿಎ–7ರ ಅಡಿಯಲ್ಲಿ ಪರವಾನಿಗೆ ಶುಲ್ಕವಾಗಿ ಪ್ರಮಾಣಾನುಗುಣವಾಗಿ ಲೆಕ್ಕ ಹಾಕಲಾಯಿತು ಹಾಗೂ ತದನಂತರ ಸಿಎಲ್–6ಎ ಅಡಿಯಲ್ಲಿ ಪರವಾನಿಗೆ ಶುಲ್ಕವನ್ನು ಲೆಕ್ಕಹಾಕಲಾಯಿತು.

| ಹೋಟೆಲಿನ ಹೆಸರು/ 3 ಸ್ಟಾರ್ ಪ್ರವರ್ಗವು ಜಾರಿಗೆ ಬಂದ ದಿನಾಂಕ | ವರ್ಷ | ಪರವಾನಿಗೆ ಶುಲ್ಕ ಮತ್ತು ಹೆಚ್ಚುವರಿ ಪರವಾನಿಗೆ ಶುಲ್ಕ | | |
|---|---|---|---|---|
| | | ಸಿಎಲ್–6ಎ ಅಡಿಯಲ್ಲಿ ವಿಧಿಸಬೇಕಾಗಿದ್ದುದು | ಸಿಎಲ್–7ರ ಅಡಿಯಲ್ಲಿ ವಿಧಿಸಿದ್ದು | ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದು |
| ವಾಸವಿ ಹೋಟೆಲು ಪ್ರೈ.ಲಿ, ಮಡಿಕೇರಿ / 19-12-2011 | 2011-12 | 6.85[7] | 4.18 | 2.67 |
| | 2012-13 | 9.20 | 4.18 | 5.02 |
| | 2013-14 | 9.20 | 4.18 | 5.02 |
| | 2014-15 | 9.20 | 4.18 | 5.02 |
| ಒಟ್ಟು | | **141.02** | **62.28** | **78.74** |

ಈ ಪ್ರಕರಣಗಳನ್ನು ಜನವರಿ 2015 ಮತ್ತು ಏಪ್ರಿಲ್ 2015ರ ನಡುವೆ ಇಲಾಖೆಯ ಗಮನಕ್ಕೆ ತಂದನಂತರ ಹಾಗೂ ಮೇ 2015ರಲ್ಲಿ ಸರ್ಕಾರಕ್ಕೆ ತಿಳಿಸಿದನಂತರ ಮೂರು ಪರವಾನಿಗೆದಾರರುಗಳಿಗೆ ಸಂಬಂಧಿಸಿದಂತೆ ₹ 23.40 ಲಕ್ಷ ಮೊತ್ತವನ್ನು ವಸೂಲಾತಿ ಮಾಡಲಾಯಿತು. ಉಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ನವಂಬರ್ 2015).

## 3.7 ಪರಿಪಕ್ವಗೊಳಿಸುವಿಕೆ (ಮೆಚುರೇಷನ್) ಪ್ರಕ್ರಿಯೆಯಲ್ಲಿ ಮದ್ಯಸಾರವನ್ನು ಅಧಿಕ ಪ್ರಮಾಣದಲ್ಲಿ ವ್ಯರ್ಥಗೊಳಿಸಿದ್ದುದು

ಕರ್ನಾಟಕ ಅಬಕಾರಿ (ಫಲ, ಉತ್ಪಾದನೆ, ಇತ್ಯಾದಿ) ನಿಯಮಗಳು, 1998ರ ನಿಯಮ 4ರ ಅಡಿಯಲ್ಲಿನ ಷೆಡ್ಯೂಲು ಬಿ ಪ್ರಕಾರ, ಭಾರತೀಯ ಮದ್ಯ ತಯಾರಿಕೆಗಾಗಿ ಮರದ ಪೀಪಾಯಿಯಲ್ಲಿ ಸಂಗ್ರಹಿಸಿಟ್ಟಿರುವಾಗ ಕಡಿಮಗೊಳಿಸಲ್ಪಟ್ಟ, ಸಮ್ಮಿಶ್ರಣಗೊಳಿಸಲ್ಪಟ್ಟ ಅಥವಾ ಸಂಯೋಜಿಸಲ್ಪಟ್ಟ ಮದ್ಯಸಾರದ ಪರಿಪಕ್ವಗೊಳಿಸುವಿಕೆಗೆ **(ಮೆಚುರೇಷನ್)** ಸಂಬಂಧಿಸಿದಂತೆ ಅನುಮತಿಸಬಹುದಾದ ವ್ಯರ್ಥದ ಗರಿಷ್ಠ ಪ್ರಮಾಣವು 6ರಿಂದ 36 ತಿಂಗಳುಗಳ ಪರಿಪಕ್ವಗೊಳಿಸುವಿಕೆ ಅವಧಿಯನ್ನು ಅವಲಂಭಿಸಿದಂತೆ ಶೇಕಡಾ 3ರಿಂದ 22ರವರೆಗೆ ಆಗಿರುತ್ತದೆ. ಪರಿಪಕ್ವಗೊಂಡನಂತರದಲ್ಲಿ ಅನುಮತಿಸಬಹುದಾದಂತಹ ತಯಾರಿಕಾ ನಷ್ಟವು ಶೇಕಡಾ ಐದು ಆಗಿರುತ್ತದೆ. ನಿರ್ದಿಷ್ಟ ಮಿತಿಯನ್ನು ಮೀರಿದಂತೆ ಮಾಡಲಾದಂತಹ ವ್ಯರ್ಥದ ಕಾರಣ ಸಂಭವಿಸುವ ಕಡಿಮೆ ಪ್ರಮಾಣದ ಮದ್ಯದ ಪರಿಮಾಣದ ಮೇಲೆ ವಿಧಿಸಬಹುದಾದಂತಹ ಅಬಕಾರಿ ಸುಂಕಕ್ಕೆ ಸಮನಾದಂತಹ ದಂಡವನ್ನು ವಿಧಿಸಲು ಮೇಲೆ ತಿಳಿಸಲಾದ ನಿಯಮಗಳ ನಿಯಮ 8 ಅಬಕಾರಿ ಆಯುಕ್ತರವರಿಗೆ ಅಧಿಕಾರವನ್ನು ನೀಡಿರುತ್ತದೆ

ಬೆಂಗಳೂರಿನ ಮೆ. ಖೋಡೆ ಇಂಡಿಯಾ ಲಿಮಿಟೆಡ್ ಇವರ ಬಟ್ಟಿಖಾನೆಯು (ಡಿಸ್ಟಿಲರಿ) 2009–10ರಿಂದ 2013–14ರ ಅವಧಿಯಲ್ಲಿ ಮರದ ಪೀಪಾಯಿಗಳಲ್ಲಿ 3ರಿಂದ 36 ತಿಂಗಳುಗಳ ಅವಧಿಗೆ ಸಂಗ್ರಹಿಸಿಡಲಾಗಿದ್ದಂತಹ ಮಾಲ್ಟ್ ಮದ್ಯಸಾರ ಹಾಗೂ ತಟಸ್ಥ ಮದ್ಯಸಾರದ ಮೇಲೆ ಕೋರಲಾಗಿದ್ದಂತಹ ಹಾಗೂ ಅನುಮತಿಸಲಾಗಿದ್ದಂತಹ ಪರಿಪಕ್ವಗೊಳಿಸುವಿಕೆಗೆ ಸಂಬಂಧಿತ ನಷ್ಟವು 13,083.50 ಪ್ರೂಫ್ ಲೀಟರುಗಳಷ್ಟು ಗರಿಷ್ಠ ಮಿತಿಯನ್ನು ಮೀರಿದ್ದಿತು. ಶೇಕಡಾ ಐದರಷ್ಟು ತಯಾರಿಕಾ ನಷ್ಟಕ್ಕೆ ಅನುಮತಿ ನೀಡಿದನಂತರವೂ, ಈ ಪರಿಮಾಣದ ಮದ್ಯಸಾರವನ್ನು ಬಳಸಿಕೊಂಡು 17,444.69 ಬಲ್ಕು ಲೀಟರುಗಳಷ್ಟು ಮದ್ಯವನ್ನು ಉತ್ಪಾದಿಸಬಹುದಾಗಿದ್ದಿತು. ಈ ಪರಿಮಾಣದ ಮೇಲೆ ಸರ್ಕಾರವು ₹ 20.46 ಲಕ್ಷ ಮೊತ್ತದಷ್ಟು ವರಮಾನವನ್ನು ಗಳಿಸಬಹುದಾಗಿದ್ದಿತು.

ಈ ಪ್ರಕರಣಗಳನ್ನು ಮೇ 2015ರಲ್ಲಿ ಇಲಾಖೆಯ ಗಮನಕ್ಕೆ ತಂದನಂತರ ಹಾಗೂ ಸರ್ಕಾರಕ್ಕೆ ಜೂನ್ 2015ರಲ್ಲಿ ತಿಳಿಸಿದನಂತರ, ರಾಜ್ಯವು ಮಾನವನ ಬಳಕೆಗೆ ಯೋಗ್ಯವಲ್ಲದ ಆಲ್ಕಹಾಲಿನ ಮದ್ಯವಲ್ಲದ ಮದ್ಯಸಾರದ ಮೇಲೆ ಅಬಕಾರಿ ಸುಂಕದ ಪಾವತಿಗಾಗಿ ತಗಾದೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ ಎಂಬುದಾಗಿ ಇಲಾಖೆಯು ಉತ್ತರಿಸಿತು. ಈ ಕಂಡಿಕೆಯಲ್ಲಿ ವರದಿ ಮಾಡಲಾಗಿರುವ ಪ್ರಕರಣದಲ್ಲಿ, ಅಬಕಾರಿ ಸುಂಕವನ್ನು ಆಕರ್ಷಿಸುವಂತಹ ಭಾರತೀಯ ಮದ್ಯವನ್ನು ತಯಾರಿಸಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಮುಂದುವರೆದು, ಪರಿಪಕ್ವಗೊಳಿಸುವಿಕೆಗೆ ಸಂಬಂಧಿತ ಪ್ರಸಕ್ತ ಇರುವ ನಿಯಮಗಳನ್ನು 1977 ಸಾಲಿನಲ್ಲಿ ರೂಪಿಸಲಾಗಿದೆ ಹಾಗೂ ಅವುಗಳು ಸಮಗ್ರವಾಗಿರುವುದಿಲ್ಲ ಹಾಗೂ ಪರಿಷ್ಕರಣೆಯ ಅಗತ್ಯತೆಯನ್ನು ಹೊಂದಿವೆ ಎಂಬುದಾಗಿಯೂ ಉತ್ತರದಲ್ಲಿ ತಿಳಿಸಲಾಗಿದ್ದಿತು. ಈ ಉದ್ದೇಶಕ್ಕಾಗಿ 17.06.2014 ದಿನಾಂಕದ ಸರ್ಕಾರಿ ಆದೇಶದ ಮೂಲಕ ಒಂದು ತಾಂತ್ರಿಕ ಸಮಿತಿಯನ್ನು ಈಗಾಗಲೇ ರಚಿಸಲಾಗಿದೆ ಹಾಗೂ ಅದರ ತೀರ್ಮಾನವನ್ನು ನಿರೀಕ್ಷಿಸಲಾಗುತ್ತಿದೆ.

[7] 19 ಡಿಸೆಂಬರ್ 2011ರವರೆಗೆ ಸಿಎಲ್–7ರ ಅಡಿಯಲ್ಲಿ ಪರವಾನಿಗೆ ಶುಲ್ಕವಾಗಿ ಪ್ರಮಾಣಾನುಗುಣವಾಗಿ ಲೆಕ್ಕಹಾಕಲಾಯಿತು ಹಾಗೂ ತದನಂತರ ಸಿಎಲ್–6ಎ ಅಡಿಯಲ್ಲಿ ಪರವಾನಿಗೆ ಶುಲ್ಕವನ್ನು ಲೆಕ್ಕಹಾಕಲಾಯಿತು.

ಅಬಕಾರಿ ಸುಂಕವನ್ನು ವಿಧಿಸುವಂತೆ ತಿಳಿಸಿರುವುದು ಮದ್ಯಸಾರದ ಮೇಲೆ ಅಲ್ಲವಾದ್ದರಿಂದ ಉತ್ತರದ ಮೊದಲ ಭಾಗವು ಒಪ್ಪುವಂತಿಲ್ಲ. ಲೆಕ್ಕಪರಿಶೋಧನೆಯು ಕರ್ನಾಟಕ ಅಬಕಾರಿ (ಫಲ, ಉತ್ಪಾದನೆ, ಇತ್ಯಾದಿ) ನಿಯಮಗಳು, 1998ರ ಅಡಿಯಲ್ಲಿನ ನಿಯಮದ ಅನುವುಗಳನ್ನು ಮಾತ್ರ ಪುನರುಚ್ಚರಿಸಿದೆ ಹಾಗೂ ಅದನ್ನು ಅನುಸರಿಸದಿರುವುದನ್ನು ಇಲಾಖೆಯ ಗಮನಕ್ಕೆ ತಂದಿದೆ. ಈ ಸಂಬಂಧವಾಗಿ ಲೆಕ್ಕಹಾಕಲಾಗಿರುವ ವರಮಾನವೂ ಸಹ ಮೇಲೆ ತಿಳಿಸಲಾಗಿರುವ ನಿಯಮಗಳ ಅಡಿಯಲ್ಲಿ ರೂಪಿಸಲಾಗಿರುವ ಉಪ–ನಿಯಮಗಳ ಅನುಸಾರವಾಗಿಯೇ ಆಗಿದೆ. ಆದಾಗ್ಯೂ, ಇಲಾಖೆಯ ಅಭಿಪ್ರಾಯದಲ್ಲಿ ನಿಯಮಗಳು ಹಳೆಯದಾಗಿವೆಯಾದಲ್ಲಿ, ಪರಿಪಕ್ವಗೊಳಿಸುವಿಕೆಗೆ ಸಂಬಂಧಿತ ವ್ಯರ್ಥವನ್ನು ಕೋರುವಲ್ಲಿ ದುರ್ಬಳಕೆಗಳಿಗೆ ವ್ಯಾಪಕ ಅವಕಾಶಗಳು ಇರುವುದರಿಂದ ಅವುಗಳನ್ನು ತಡೆಗಟ್ಟುವ ಸಲುವಾಗಿ ತ್ವರಿತ ಕ್ರಮಗಳ ಅಗತ್ಯತೆಯಿದೆ. ಹೊಸ ಪರಿಮಾಣಗಳನ್ನು ಸಾಧ್ಯವಾದಷ್ಟು ಬೇಗನೆ ಕಾರ್ಯಗತಗೊಳಿಸುವ ಸಲುವಾಗಿ ತಮ್ಮ ಕಾರ್ಯವಿಧಾನಗಳನ್ನು/ಪ್ರಕ್ರಿಯೆಗಳನ್ನು ತ್ವರಿತಗೊಳಿಸುವಂತೆ ಈ ನಿಟ್ಟಿನಲ್ಲಿ ರಚಿಸಲಾಗಿರುವ ಸಮಿತಿಗೆ ನಿರ್ದೇಶನಗಳನ್ನು ನೀಡಬೇಕು (ನವಂಬರ್ 2015).